

بِسْمِ اللّٰهِ الرَّحْمَنِ الرَّحِيم

# ಮಕ್ಕಳ ತರಬೇತಿ ಮತ್ತು ಅವರಿಗಾಗಿ ಪ್ರಾರ್ಥನೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 14–07–2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅನೇಕ ಮಹಿಳೆಯರು ಮತ್ತು ಪುರುಷರು ನನಗೆ ಹೀಗೆ ಪತ್ರ ಬರೆಯುತ್ತಾರೆ: ನಮಗೆ ಮಗು ಜನಿಸಲಿದೆ ತಾವು ಅದಕ್ಕೋಸ್ಕರ ಪ್ರಾರ್ಥಿಸಿರಿ ಎಂದು. ಅಥವಾ ಅವರು ಬರೆಯುತ್ತಾರೆ: ಜನಿಸಲಿರುವ ಮಗುವಿನ ಪರವಾಗಿ ನಾವು ಏನೆಂದು ಪ್ರಾರ್ಥಿಸಬೇಕು? ಕೆಲವರು ಹೀಗೆ ಬರೆಯುತ್ತಾರೆ: ನಮ್ಮ ಮಕ್ಕಳು ಬಾಲ್ಯದಿಂದ ಯೌವನಕ್ಕೆ ಸಾಗುತ್ತಿದ್ದಾರೆ. ಅವರ ತರಬೇತಿ ಬಗ್ಗೆ ಚಿಂತೆ ಇರುತ್ತದೆ. ಅವರಿಗೋಸ್ಕರ ಹೇಗೆ ಪ್ರಾರ್ಥಿಸಬೇಕು ಅವರು ಸರಿಯಾದ ಮಾರ್ಗದಲ್ಲಿ ಮತ್ತು ಒಳಿತುಗಳಲ್ಲಿ ನೆಲೆಗೊಳ್ಳಲು ಅವರನ್ನು ಯಾವ ರೀತಿಯಲ್ಲಿ ತರಬೇತಿ ಮಾಡಬೇಕು? ಹೀಗೆ ಅನೇಕ ಪತ್ರಗಳು ಬರುತ್ತಿವೆ. ಮುಸ್ಲಿಮರಾದ ನಮಗೆ ಅಲ್ಲಾಹನು ಔದಾರ್ಯಪೂರ್ಣವಾಗಿ ಪವಿತ್ರ ಖುರ್‌ಆನಿನಲ್ಲಿ ವಿವಿಧ ಸ್ಥಳಗಳಲ್ಲಿ ಮಕ್ಕಳ ಜನನಕ್ಕೆ ಮುಂಚಿತವಾದ ಕಾಲದಿಂದ ಪ್ರಾರಂಭಿಸಿ ಮಗು ದಾಟಿಹೋಗುವ ವಿವಿಧ ಅವಸ್ಥೆಗಳ ಕಾಲದಲ್ಲಿ ಅವರ ತರ್‌ಬಿಯತ್‌ಗಾಗಿ ತಂದೆ ತಾಯಂದಿರು ಮಾಡಬೇಕಾದ ಪ್ರಾರ್ಥನೆಗಳನ್ನು ಕಲಿಸಿಕೊಟ್ಟಿರುತ್ತಾನೆ. ತರಬೇತಿ ನೀಡಬೇಕಾದ ರೀತಿಯನ್ನೂ ಕಲಿಸಿದ್ದಾನೆ. ತಂದೆ ತಾಯಂದಿರ ಹೊಣೆಗಾರಿಕೆಗಳೇನೆಂದು ಗಮನ ಹರಿಸಿದ್ದಾನೆ. ನಾವು ನಮಗೆ ಕಲಿಸಲಾದ ಪ್ರಾರ್ಥನೆಗಳನ್ನು ಮಾಡುವವರಾದರೆ, ನಾವು ಅಲ್ಲಾಹನು ಹೇಳಿದ ರೀತಿಯಲ್ಲಿ ಜೀವಿಸುವವರಾದರೆ, ಮತ್ತು ಮಕ್ಕಳ ತರಬೇತಿ ಬಗ್ಗೆ ಲಕ್ಷ್ಯ ನೀಡುವವರಾಗುವುದಾದರೆ ಸಾತ್ವಿಕರ ಒಂದು ಪೀಳಿಗೆಯನ್ನು ಮುಂದಕ್ಕೆ ಕಳುಹಿಸುವವರಾಗಲು ನಮಗೆ ಸಾಧ್ಯವಾಗುವುದು.

ಮಕ್ಕಳನ್ನು ಉತ್ತಮ ರೀತಿಯಲ್ಲಿ ತರಬೇತಿ ಮಾಡುವುದು ಸುಲಭದ ಕೆಲಸವೇನೂ ಅಲ್ಲ ಎಂಬುದರ ಬಗ್ಗೆ ಸಂಶಯವಿಲ್ಲ. ವಿಶಿಷ್ಟವಾಗಿ ಇಂದಿನ ಕಾಲದಲ್ಲಿ ಹೆಜ್ಜೆ ಹೆಜ್ಜೆಗೆ ಶೈತಾನನು ಸೃಷ್ಟಿಸಿರುವ ಆಸಕ್ತಿಗಳು ವಿವಿಧ ರೀತಿಗಳಲ್ಲಿ ಪ್ರತಿದಿನ ನಮ್ಮ ಮುಂದೆ ಬರುತ್ತಿರುವಾಗ ಈ ತರಬೇತಿಯ ಕೆಲಸ ಬಹಳ ಕಷ್ಟಕರವಾಗಿರುತ್ತದೆ. ಆದರೆ ಅಲ್ಲಾಹನು ನಮಗೆ ಪ್ರಾರ್ಥನೆಗಳನ್ನೂ ತರಬೇತಿಯ ರೀತಿಯನ್ನೂ ಕಲಿಸಿರುವುದರಿಂದ ನಾವು ಅವುಗಳನ್ನು ಅನುಸರಿಸಲು ಇಚ್ಛಿಸುವುದಾದರೆ ನಾವು ನಮ್ಮನ್ನೂ ನಮ್ಮ ಮಕ್ಕಳನ್ನೂ ಶೈತಾನನ ಆಕ್ರಮಣಗಳಿಂದ ರಕ್ಷಿಸಲು ಸಾಧ್ಯವಿದೆ. ಆದರೆ ಇದಕ್ಕೋಸ್ಕರ ನಿರಂತರವಾಗಿ ಪ್ರಾರ್ಥಿಸುವುದು, ಅಲ್ಲಾಹನ ಸಹಾಯ ಬೇಡಿಕೊಳ್ಳುವುದು ಮತ್ತು ಅದಕ್ಕೋಸ್ಕರ ಕಷ್ಟಪಟ್ಟು ಪ್ರಯತ್ನಿಸುವುದು ಆವಶ್ಯಕವಾಗಿದೆ. ಒಂದು ನಿರಂತರ ಜಿಹಾದ್ ಮಾಡುವ ಆವಶ್ಯಕತೆ ಇದೆ. ಒಬ್ಬ ನೈಜ ಸತ್ಯ ವಿಶ್ವಾಸಿಯ ಬಗ್ಗೆ ಇರುವ ಪ್ರತೀಕ್ಷೆ ಏನೆಂದರೆ ಅವನು ಅಲ್ಲಾಹನ ಜೊತೆ ತನ್ನನ್ನು ಜೋಡಿಸಿಕೊಂಡು ತನ್ನನ್ನೂ ತನ್ನ ಮಕ್ಕಳನ್ನೂ ರಕ್ಷಿಸಬೇಕೆಂದಾಗಿದೆ. ಸತ್ಯವಿಶ್ವಾಸಿ ನಿರಾಶೆ ಹೊಂದಬಾರದು, ಅವನು ಬಳಲಬಾರದು. ಭಯಭೀತನಾಗಿ ನಕಾರಾತ್ಮಕ ಚಿಂತೆಗಳು ತನ್ನ ಮೇಲೆ ಪ್ರಭಾವ ಬೀರುವಂತೆ ಮಾಡಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಲ್ಲಾಹನು ಯಾವ ಕ್ರಾಂತಿಯನ್ನು ಉಂಟುಮಾಡಲು ಲೋಕಕ್ಕೆ ಕಳುಹಿಸಿರುವನೋ, ಅವರ ಆಗಮನದ ಉದ್ದೇಶ ನೆರವೇರಿಸಲು ನಾವು ನಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಬಳಸಿ ಅದರಲ್ಲಿ ಭಾಗವಹಿಸಬೇಕಾಗಿದೆ. ಮತ್ತು ನಮ್ಮ ಮಕ್ಕಳಲ್ಲಿ ಅದರ ಆತ್ಮವನ್ನು ಊದಬೇಕಾಗಿರುತ್ತದೆ. ಇದೇ ನಮ್ಮ ಉದ್ದೇಶಲಕ್ಷ್ಯವಾಗಿದೆ. ನಾವು ನಮ್ಮ ಮಕ್ಕಳಿಗೋಸ್ಕರ ಪ್ರಾರ್ಥಿಸಬೇಕು ಮತ್ತು ಅವರಿಗೆ ತರಬೇತಿ ನೀಡಬೇಕು. ಸಮಾಜದಲ್ಲಿ ಕೊಳಕುಗಳೂ ಮಾಲಿನ್ಯಗಳೂ ಇದ್ದರೂ ಶೈತಾನನು ಜಯಗಳಿಸಲು ನಾವು ಬಿಡಬಾರದು. ಇನ್‌ಶಾಅಲ್ಲಾಹ್– ಲೋಕದಲ್ಲಿ ಅಲ್ಲಾಹನ ರಾಜ್ಯ ಸ್ಥಾಪಿಸಲು ನಾವು ಪ್ರಯತ್ನಿಸಬೇಕಾಗಿದೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ನಮಗೆ ಸಾತ್ವಿಕರಾದ ಮಕ್ಕಳಿಗೋಸ್ಕರ ಮಾಡಬೇಕಾದ ಪ್ರಾರ್ಥನೆಯನ್ನು ಕಲಿಸಿದ್ದಾನೆ. ಹಝ್ರತ್ ಝಕರಿಯಾ ಅಲೈಹಿಸ್ಸಲಾಮರ ಮೂಲಕ ಈ ಪ್ರಾರ್ಥನೆಯನ್ನು ಕಲಿಸಲಾಗಿದೆ. **ರಬ್ಬಿ ಹಬ್‌ಲೀ ಮಿನಲ್ಲದುನ್‌ಕ ಝುರ್‍ರಿಯ್ಯತನ್ ತಯ್ಯಿಬತನ್ ಇನ್ನಕ ಸಮೀಉದ್ದುಆ.** ನನ್ನ ಪ್ರಭೂ, ನೀನು ನನಗೆ ನಿನ್ನ ಕಡೆಯಿಂದ ಪರಿಶುದ್ಧವಾದ ಸಂತಾನಗಳನ್ನು ಪ್ರದಾನಮಾಡು. ನಿಶ್ಚಯವಾಗಿಯೂ ನೀನು ಪ್ರಾರ್ಥನೆಗಳನ್ನು ಆಲಿಸುವವನಾಗಿರುವೆ.(3:39). ಅಲ್ಲಾಹನು ಸ್ವತಃ ಈ ಪ್ರಾರ್ಥನೆ ಕಲಿಸಿದ್ದಾನೆ. ಅಲ್ಲಾಹನು ಹೇಳುತ್ತಾನೆ: ನಾನು ಪ್ರಾರ್ಥನೆಗಳನ್ನು ಆಲಿಸುವವನಾಗಿದ್ದೇನೆ. ಆದುದರಿಂದ ನೀವು ಹೇಳಿರಿ: ಓ ಅಲ್ಲಾಹ್, ನೀನು ಪ್ರಾರ್ಥನೆಗಳನ್ನು ಆಲಿಸುವವನಾಗಿರುವೆ ಆದುದರಿಂದ ನಮ್ಮ ಪ್ರಾರ್ಥನೆಗಳನ್ನು ಅಂಗೀಕರಿಸು. ನಮಗೆ ಪರಿಶುದ್ಧರಾದ ಮಕ್ಕಳನ್ನು ದಯಪಾಲಿಸು.

ಪರಿಶುದ್ಧರಾದ ಮಕ್ಕಳನ್ನು ಹೊಂದಲು ಪ್ರಾರ್ಥಿಸಬೇಕಾಗಿದೆ. ಅದರೊಂದಿಗೆ ತಂದೆ ತಾಯಿ ಸಹ ಪರಿಶುದ್ಧ ಯೋಚನೆ ಮಾಡುವವರೂ ಒಳ್ಳೆಯ ಕೆಲಸ ಮಾಡುವವರೂ ಆಗಿರಬೇಕು. ಸಾತ್ವಿಕರ ಮತ್ತು ಪ್ರವಾದಿಗಳ ಸ್ವಭಾವ ಗುಣಗಳನ್ನು ಹೊಂದುವ ಆವಶ್ಯಕತೆ ಸಹ ಇರುತ್ತದೆ. ಕೆಲವು ತಾಯಂದಿರು ಧಾರ್ಮಿಕ ಕಾರ್ಯಗಳ ಕಡೆಗೆ ಲಕ್ಷ್ಯ ನೀಡುವವರೂ ಆರಾಧನೆಗಳನ್ನೂ ಮಾಡುವವರಾಗಿರುತ್ತಾರೆ. ಆದರೆ ಅವರ ಪತಿ ಹಾಗೆ ಇರುವುದಿಲ್ಲ. ಹಾಗೆಯೇ ಕೆಲವು ಸ್ಥಳಗಳಲ್ಲಿ ಪುರುಷರು ಹೊಣೆಗಾರಿಕೆಗಳನ್ನು ಅರಿತವರಾಗಿರುತ್ತಾರೆ. ಆದರೆ ಅವರ

ಪತ್ನಿಯರು ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವವರಾಗಿರುವುದಿಲ್ಲ. ಮಕ್ಕಳು ಸಾತ್ವಿಕರಾಗಲು ಮತ್ತು ಈ ಕಾಲಘಟ್ಟದ ಕೆಟ್ಟ ಪ್ರಭಾವಗಳಿಂದ ರಕ್ಷಿಸಲ್ಪಡಲು ಆವಶ್ಯಕವಾದುದೇನೆಂದರೆ ಮಕ್ಕಳನ್ನು ಆಶಿಸುವ ಮೊದಲು ಮತ್ತು ಮಕ್ಕಳು ಜನಿಸುವ ಮೊದಲು ಪತಿ ಮತ್ತು ಪತ್ನಿ ಇಬ್ಬರೂ ಒಳಿತುಗಳನ್ನು ಮಾಡುವವರಾಗಿರಬೇಕು.

ಹಝ್ರತ್ ಝಕರಿಯಾ ಅಲೈಹಿಸ್ಸಲಾಮರ ಇನ್ನೊಂದು ಪ್ರಾರ್ಥನೆ ಸಹ ಪವಿತ್ರ ಖುರ್‌ಆನ್‌ನ ಸೂರಃ ಅಂಬಿಯಾದಲ್ಲಿ ಈ ರೀತಿ ಉಲ್ಲೇಖಿತವಾಗಿದೆ: **ರಬ್ಬಿ ಲಾತಝುರ್‌ನೀ ಫರ್ದನ್ ವ ಅನ್‌ತ ಖೈರುಲ್ ವಾರಿಸೀನ್.** ನನ್ನ ಪ್ರಭೂ, ನನ್ನನು ಒಬ್ಬಂಟಿಗನಾಗಿ ಬಿಟ್ಟು ಬಿಡಬೇಡ. ನೀನು ಎಲ್ಲ ವಾರೀಸುದಾರರಿಗಿಂತ ಅತ್ಯುತ್ತಮನಾಗಿರುವೆ.(13:90). ಈ ಪ್ರಾರ್ಥನೆಯಲ್ಲಿ ಅಲ್ಲಾಹನನ್ನು **ಖೈರುಲ್ ವಾರಿಸೀನ್** ಎಂದು ಕರೆದಿರುವುದರಿಂದ ಸ್ಪಷ್ಟವಾಗುವುದೇನೆಂದರೆ, ಮಕ್ಕಳಿಗೋಸ್ಕರ ಮಾಡುವ ಪ್ರಾರ್ಥನೆ ಕೇವಲ ಲೌಕಿಕ ವಾರೀಸುದಾರರು ಹುಟ್ಟಲಿ ಎಂಬುದಕ್ಕೆ ಮಾತ್ರವಲ್ಲ, ಧಾರ್ಮಿಕ ಕಾರ್ಯಗಳಿಗೆ, ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವಂತಹ ಮಕ್ಕಳು ಜನಿಸುವಂತೆ ಅಲ್ಲಾಹನು ಮಾಡಲಿ ಎಂಬ ಬೇಡಿಕೆ ಸಹ ಈ ಪ್ರಾರ್ಥನೆಯಲ್ಲಿದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ಯಾರು ಸ್ವತಃ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುತ್ತಾರೋ ಅವರಿಗೆ ಮಾತ್ರ ಈ ರೀತಿಯಲ್ಲಿ ಪ್ರಾರ್ಥಿಸಲು ಸಾಧ್ಯ. ಒಬ್ಬನು ಲೌಕಿಕ ವ್ಯವಹಾರಗಳಲ್ಲಿ ಮಾತ್ರ ಮುಳುಗಿದ್ದರೆ ಸಾತ್ವಿಕರಾದ ವಾರೀಸುದಾರರನ್ನು ನೀಡಬೇಕೆಂದು ಪ್ರಾರ್ಥಿಸಲು ಹೇಗೆ ತಾನೆ ಸಾಧ್ಯ. ಒಬ್ಬ ಪತ್ನಿ, ತನ್ನ ಪತಿ ಮಕ್ಕಳನ್ನು ಆಶಿಸುವ ಕಾರಣದಿಂದ ಮಾತ್ರ ಮಕ್ಕಳನ್ನು ಬಯಸುತ್ತಿರುವುದಾದರೆ ಅಂತಹ ಮಕ್ಕಳು ಕೆಲವು ಸಾರಿ ಪರೀಕ್ಷೆಗಳಿಗೆ ತುತ್ತಾಗಲು ಕಾರಣೀಭೂತರಾಗುತ್ತಾರೆ.

ಮಕ್ಕಳನ್ನು ಪಡೆಯಬೇಕೆಂಬ ಇಚ್ಛೆ ಬಹಳ ಧರ್ಮ ಬದ್ಧವಾದ ಇಚ್ಛೆಯಾಗಿದೆ. ಆದರೆ ಅದರೊಂದಿಗೆ ಸಾತ್ವಿಕರಾದ ವಾರೀಸುದಾರರು ಜನಿಸಲಿ ಎಂದು ಪ್ರಾರ್ಥಿಸುವುದು ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಹೇಳಿದ್ದಾರೆ: ತಮ್ಮ ವಾರೀಸುದಾರರಾಗಲಿ ಎಂಬ ಏಕ ಮಾತ್ರ ಇಚ್ಛೆಯಿಂದ ಮಕ್ಕಳಿಗೋಸ್ಕರ ಬೇಡಿಕೊಳ್ಳಬೇಡಿರಿ. ಒಳ್ಳೆಯವರೂ ಸಾತ್ವಿಕರೂ ಧಾರ್ಮಿಕ ಸೇವೆ ಮಾಡುವವರೂ ಆಗುವಂತಹ ವಾರೀಸುದಾರರಿಗೋಸ್ಕರ ಪ್ರಾರ್ಥಿಸಿರಿ. ಇಲ್ಲವಾದರೆ ಮಕ್ಕಳು ಸಹ ನೀವು ಪರೀಕ್ಷೆಗೊಳಗಾಗಲು ಕಾರಣವಾಗಬಲ್ಲರು. ಇನ್ನೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಮಕ್ಕಳ ಕಾರಣದಿಂದ ಸಂಭವಿಸುವ ಪರೀಕ್ಷೆ ಬಹಳ ದೊಡ್ಡ ಪರೀಕ್ಷೆಯಾಗಿದೆ. ಮಕ್ಕಳು ಸಾತ್ವಿಕರಾಗಿದ್ದರೆ ಬೇರೆ ಯಾವ ವಿಷಯದ ಬಗ್ಗೆಯೂ ಚಿಂತಿಸಬೇಕಿಲ್ಲ. ಅಲ್ಲಾಹನು ಹೇಳುತ್ತಾನೆ: **ಹುವ ಯತವಲ್ಲಸ್ಸಾಲಿಹೀನ್.** (ಅಲ್ಲಾಹನು ಸ್ವತಃ ಸಾತ್ವಿಕರ ಸಂರಕ್ಷಕನಾಗಿರುತ್ತಾನೆ). ಮನುಷ್ಯನು ದುಷ್ಟನಾಗಿದ್ದರೆ ಅವನಿಗೋಸ್ಕರ ಲಕ್ಷಗಟ್ಟಲೆ ರೂಪಾಯಿಗಳನ್ನು ಅವನ ತಂದೆ ಬಿಟ್ಟು ಹೋದರೂ ಅವನು ಅದನ್ನು ದುಷ್ಕರ್ಮಗಳಲ್ಲಿ ಬಳಸಿ ನಾಶಗೊಳಿಸಿ ನಿರ್ಗತಿಕನಾಗಿ ಕಷ್ಟಪಡುವನು. ಯಾವನು ತನ್ನ ಇಚ್ಛೆಯನ್ನು ಅಲ್ಲಾಹನ ಇಚ್ಛೆಗೆ ಅನುಸಾರವಾಗಿ ಮಾಡಿಕೊಳ್ಳುತ್ತಾನೋ ಅವನು ತನ್ನ ಮಕ್ಕಳ ಬಗ್ಗೆ ಸಮಾಧಾನ ಹೊಂದಿದವನಾಗಿರುತ್ತಾನೆ. ಅಲ್ಲಾಹನ ಇಚ್ಛೆ ಎಂದರೆ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡಬೇಕೆಂಬುದಾಗಿದೆ.

ಇನ್ನೊಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಉಪದೇಶಿಸುತ್ತಾರೆ: ನೀವು ಸ್ವತಃ ಸಾತ್ವಿಕರಾಗಿರಿ ಮತ್ತು ನೀವು ನಿಮ್ಮ ಮಕ್ಕಳಿಗೆ ಸಾತ್ವಿಕತೆ ಮತ್ತು ತಖ್ವದ ಉತ್ತಮ ಮಾದರಿಯಾಗಿರಿ. ನಿಮ್ಮ ಮಕ್ಕಳನ್ನು ಧರ್ಮ ನಿಷ್ಠರೂ ತಖ್ವ ಭರಿತರೂ ಆಗಲು ಪ್ರಯತ್ನಿಸಿರಿ ಮತ್ತು ಅದಕ್ಕಾಗಿ ಪ್ರಾರ್ಥಿಸಿರಿ. ನೀವು ನಿಮ್ಮ ಮಕ್ಕಳಿಗೋಸ್ಕರ ಸಂಪತ್ತು ಸಂಗ್ರಹಿಸಲು ಎಷ್ಟು ಪ್ರಯತ್ನ ಮಾಡುತ್ತಿರುವಿರೋ ಅದೇ ರೀತಿಯ ಪ್ರಯತ್ನ ಈ ವಿಷಯಗಳ ಬಗ್ಗೆ ಸಹ ಮಾಡಿರಿ. ಭೂಸ್ವತ್ತನ್ನು ಹೊಂದಿದ ಕೆಲವರು, ಈ ಸ್ವತ್ತಿಗೆ ವಾರೀಸುದಾರರಾಗಲು ಮಕ್ಕಳು ಹುಟ್ಟಬೇಕೆಂದು ಹೇಳುವುದನ್ನು ನಾನು ಆಲಿಸಿದ್ದೇನೆ. ಆ ಜನರು ತಿಳಿಯುವುದಿಲ್ಲ, ಮೃತರಾದ ನಂತರ ಅವರಿಗೆ ಮಕ್ಕಳು ಯಾರು, ಇತರರು ಯಾರು? ಎಲ್ಲರೂ ಮೃತರಿಗೆ ಅನ್ಯರೇ ಆಗಿರುತ್ತಾರೆ. ಆದುದರಿಂದ ಮಕ್ಕಳು ಜನಿಸಬೇಕೆಂಬ ಆಶೆ ಹೊಂದುವುದಾದರೆ ಅದು, ಅವರು ಧಾರ್ಮಿಕ ಸೇವೆ ಮಾಡುವವರಾಗಬೇಕೆಂಬ ಉದ್ದೇಶದಿಂದಾಗಿರಬೇಕು.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಕಲಿಸಿದ ಇನ್ನೊಂದು ಪ್ರಾರ್ಥನೆ ಹೀಗಿದೆ: **ವ ಅಸ್‌ಲಿಹ್‌ಲೀ ಫೀ ಝುರ್ರಿಯತೀ ಇನ್ನೀ ತುಬ್‌ತು ಇಲೈಕ ವಇನ್ನೀ ಮಿನಲ್ ಮುಸ್ಲಿಮೀನ್.** ನನಗೋಸ್ಕರ ನನ್ನ ಸಂತತಿಗಳನ್ನು ಧರ್ಮ ನಿಷ್ಠರನ್ನಾಗಿ ಮಾಡು. ನಾನು ನಿನ್ನ ಕಡೆಗೆ ಪಶ್ಚಾತ್ತಾಪಗೊಂಡು ತಿರುಗುತ್ತೇನೆ. ನಾನು ನಿನಗೆ ಶರಣಾಗುವವರೊಂದಿಗೆ ಸೇರಿದ್ದೇನೆ.(45:16). ಈ ಪ್ರಾರ್ಥನೆಯಲ್ಲಿ ಮಕ್ಕಳನ್ನು ಧರ್ಮನಿಷ್ಠರನ್ನಾಗಿ ಮಾಡಬೇಕೆಂದು ಬೇಡಿಕೊಳ್ಳುವುದರೊಂದಿಗೆ ನಾನು ನಿನ್ನ ಕಡೆಗೆ ಪಶ್ಚಾತ್ತಾಪದಿಂದ ಮರಳುವವನೂ ನಿನ್ನ ಆಜ್ಞೆ ಪಾಲಿಸುವವನೂ ಆಗಿದ್ದೇನೆ. ಅಥವಾ ಆಗುವೆನು ಎಂದು ಪ್ರಾರ್ಥಿಸಲಾಗಿದೆ. ಆದುದರಿಂದ ಮಕ್ಕಳಿಗೋಸ್ಕರ ಪ್ರಾರ್ಥಿಸುವಾಗ ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರುವುದು ಮತ್ತು ಪರಿಪೂರ್ಣ ಅನುಸರಣೆ ಮಾಡುವುದು ಆವಶ್ಯಕವಾಗಿದೆ. ಆಗ ಮಾತ್ರ ಪ್ರಾರ್ಥನೆ ಅಲ್ಲಾಹನಿಂದ ಅಂಗೀಕಾರ ಪಡೆಯುತ್ತದೆ.

ಒಟ್ಟಿನಲ್ಲಿ, ತಾಯಿಗೂ ತಂದೆಗೂ ಬಹಳ ದೊಡ್ಡ ಹೊಣೆಗಾರಿಕೆ ಇದೆ. ಅಲ್ಲಾಹನು ನೀಡಿದ ಆಜ್ಞೆಗಳಿಗೆ ವಿರುದ್ಧವಾಗಿ ವರ್ತಿಸುವ ವ್ಯಕ್ತಿ ಮಕ್ಕಳ ಬಗ್ಗೆ ಮಾಡುವ ಪ್ರಾರ್ಥನೆಯಲ್ಲಿ ಒಳ್ಳೆಯ ಸಂಕಲ್ಪ ಇರುವುದಿಲ್ಲ. ಅಂಥವರು, ನಾವು ನಮ್ಮ ಮಕ್ಕಳಿಗೋಸ್ಕರ ಬಹಳ ಪ್ರಾರ್ಥಿಸಿದೆವಾದರೂ ಅವರು ಬಿಗಡಾಯಿಸಿದರು. ಅಥವಾ ನಮ್ಮನ್ನು ಪರೀಕ್ಷೆಗೆ ಗುರಿ ಮಾಡಿದರು ಎಂದು ಹೇಳುವ ಮಾತಿನಲ್ಲಿ ಯಾವ ಅರ್ಥವೂ ಇರುವುದಿಲ್ಲ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಒಂದು ಸಮಗ್ರವಾದ ಪ್ರಾರ್ಥನೆಯನ್ನು ಹೀಗೆ ಕಲಿಸಿದ್ದಾನೆ: **ರಬ್ಬನಾ ಹಬ್‌ಲನಾ ಮಿನ್ ಅಝ್ವಾಜಿನಾ ವಝುರ್‍ರಿಯ್ಯಾತಿನಾ ಖುರ್‍ರತ ಅಲ್‌ಯುನಿನ್ ವಜ್‌ಅಲ್‌ನಾ ಲಿಲ್ ಮುತ್ತಖೀನ ಇಮಾಮ.** ನಮ್ಮ ಪ್ರಭೂ, ನಮ್ಮ ಬಾಳಸಂಗಾತಿಗಳನ್ನೂ ನಮ್ಮ ಮಕ್ಕಳನ್ನೂ ನಮಗೆ ನಯನಾನಂದಕರವಾಗಿ ಮಾಡು, ಹಾಗೂ ನಮ್ಮನ್ನು ಸಜ್ಜನರಿಗೆ ನಾಯಕರನ್ನಾಗಿ ಮಾಡು.(25:75). ಈ ಪ್ರಾರ್ಥನೆಯನ್ನು ಮಕ್ಕಳಿಗೋಸ್ಕರ ಮತ್ತು ತಮ್ಮ ಜೀವನ ಸಂಗಾತಿಗೋಸ್ಕರ ಪುರುಷರೂ ಮಹಿಳೆಯರೂ ಮಾಡಬೇಕಾಗಿದೆ. ಪತಿ ಮತ್ತು ಪತ್ನಿ ಇಬ್ಬರೂ ಸಾತ್ವಿಕರಾದ ಮಕ್ಕಳನ್ನು ಪಡೆಯಬೇಕೆಂಬ ಅಭಿಲಾಷೆಯೊಂದಿಗೆ ಪ್ರಾರ್ಥಿಸುವಾಗ, ಮಕ್ಕಳು ಜನಿಸಿದ ನಂತರ ಸಹ ಅವರ ಕೆಲಸ ಕೊನೆಗೊಳ್ಳುವುದಿಲ್ಲ. ತಂದೆಯೂ, ತಾಯಿಯೂ, ಪತಿಯೂ ಪತ್ನಿಯೂ ತಮ್ಮ ತಮ್ಮ ವಲಯದಲ್ಲಿ ಮೇಲ್ವಿಚಾರಕರೂ ಇಮಾಮರೂ ಆಗಿರುತ್ತಾರೆ. ಆದರೆ ಅವರು ಸ್ವತಃ ತಖ್ವವನ್ನು ಅನುಸರಿಸಿ ವರ್ತಿಸುವಾಗ ಮತ್ತು ತಮ್ಮ ಮಕ್ಕಳಿಗೋಸ್ಕರ ಪ್ರಾರ್ಥಿಸುತ್ತಿರುವಾಗ ಮತ್ತು ತಮ್ಮ ಕರ್ಮಗಳನ್ನು ಪರಿಶೋಧಿಸುತ್ತಿರುವಾಗ ಮಾತ್ರ ಇದು ಸಾಧ್ಯವಾಗುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೇಳುತ್ತಾರೆ: ಜನರು ತಮಗೆ ಮಕ್ಕಳಾಗಬೇಕೆಂದು ಆಶಿಸುತ್ತಾರೆ. ತಮ್ಮ ಮಕ್ಕಳು ಧರ್ಮದ ಸೇವಕರಾಗಬೇಕು ಎಂದು ಅವರು ಆಶಿಸುವುದಿಲ್ಲ. ಅವರು ಬಯಸುವುದು ತಮ್ಮ ಮಕ್ಕಳು ತಮಗೆ ಲೌಕಿಕ ವಾರೀಸುದಾರರಾಗಬೇಕೆಂದಾಗಿದೆ. ಅವರಿಗೆ ಮಕ್ಕಳು ಜನಿಸಿದಾಗ ಆ ಮಕ್ಕಳಿಗೆ ತರಬೇತಿ ನೀಡುವ ಬಗ್ಗೆ ಚಿಂತಿಸುವುದಿಲ್ಲ. ಅವರ ವಿಶ್ವಾಸಗಳ ಸುಧಾರಣೆ ಮಾಡಲು ಸಹ ಪ್ರಯತ್ನಿಸುವುದಿಲ್ಲ. ಅವರಿಗೆ ಧರ್ಮದ ಬಗ್ಗೆ ಶಿಕ್ಷಣ ಸಹ ನೀಡುವುದಿಲ್ಲ. ಅವರು ಲೌಕಿಕ ವಿದ್ಯಾಭ್ಯಾಸದಲ್ಲಿ ನಿರತರಾಗಿರುತ್ತಾರೆ. ಲೌಕಿಕ ಕೆಲಸಗಳಲ್ಲಿ ಮಗ್ನರಾಗಿರುತ್ತಾರೆ. ಆದುದರಿಂದ ಅವರು ಸ್ವತಃ ಧರ್ಮದ ಬಗ್ಗೆ ಗಮನ ಹರಿಸುವುದಿಲ್ಲ. ಮಕ್ಕಳಿಗೂ ಧಾರ್ಮಿಕ ವಿದ್ಯಾಭ್ಯಾಸ ನೀಡುವ ಬಗ್ಗೆ ವ್ಯವಸ್ಥೆ ಮಾಡುವುದಿಲ್ಲ. ಮಕ್ಕಳ ಸ್ವಭಾವ ಗುಣಗಳನ್ನು ಸುಧಾರಣೆ ಮಾಡಲು ಸಹ ಅವರು ಪ್ರಯತ್ನಿಸುವುದಿಲ್ಲ. ಆದರೆ ಧಾರ್ಮಿಕ ವಿಶ್ವಾಸಗಳ ಬಗ್ಗೆ ಕಲಿಸುವುದು ಆವಶ್ಯಕವಾಗಿದೆ. ನೆನಪಿಡಿರಿ, ಯಾರು ತನ್ನ ಸಮೀಪದ ಸಂಬಂಧಗಳ ಬಗ್ಗೆ ತಿಳಿದಿರುವುದಿಲ್ಲವೋ ಅವನ ವಿಶ್ವಾಸ ಸರಿಯಾಗಿರಲಾರದು. ಅವನು ಇದರ ಬಗ್ಗೆ ತಿಳಿಯದಿರುವಾಗ ಅವನು ಬೇರೆ ಒಳಿತುಗಳನ್ನು ಮಾಡುವನೆಂದು ಪ್ರತೀಕ್ಷಿಸುವುದು ಹೇಗೆ? ಮಕ್ಕಳನ್ನು ಹೊಂದುವ ಬಗ್ಗೆ ಜನರ ಆಶೆಯನ್ನು ಅಲ್ಲಾಹನು ವಿವರಿಸಿರುವುದು– **ರಬ್ಬನಾ ಹಬ್‌ಲನಾ ಮಿನ್ ಅಝ್ವಾಜಿನಾ ವಝುರ್‍ರಿಯ್ಯಾತಿನಾ ಖುರ್‍ರತ ಅಲ್‌ಯುನಿನ್ ವಜ್‌ಅಲ್‌ನಾ ಲಿಲ್ ಮುತ್ತಖೀನ ಇಮಾಮ** ಎಂದಾಗಿದೆ. ಅಂದರೆ ನಮ್ಮ ಪತ್ನಿಯರಿಂದಲೂ ಮಕ್ಕಳಿಂದಲೂ ನಮ್ಮ ಕಣ್ಣಿಗೆ ತಂಪು ದೊರಕುವಂತಾಗಲಿ ಎಂದು. ಇದು ಸಾಧ್ಯವಾಗುವುದು ಅವರು ದುಷ್ಕೃತ್ಯಗಳನ್ನು ಮಾಡದೆ ಇಬಾದುರ್‍ರಹ್ಮಾನ್ ಆಗಿ ಜೀವಿಸುವಾಗ ಮಾತ್ರವಾಗಿದೆ. ಅಲ್ಲಾಹನಿಗೆ ಪ್ರತಿಯೊಂದು ವಸ್ತುವಿನ ಮೇಲೆ ಆದ್ಯತೆ ನೀಡುವಾಗ ಆಗಿದೆ. ಮಕ್ಕಳು ಸಾತ್ವಿಕರಾದರೆ ಅವರು ಆ ಮುತ್ತಖಿಯಾದ ಮಕ್ಕಳ ಇಮಾಮರಾಗುತ್ತಾರೆ. ಇದರಲ್ಲಿ ಪ್ರಾರ್ಥಿಸುವವರು ಮುತ್ತಖೀಗಳಾಗುವ ಬಗ್ಗೆ ಮತ್ತು ಮಕ್ಕಳು ಸಹ ಮುತ್ತಖಿಗಳಾಗುವ ಬಗ್ಗೆ ಬೇಡಿಕೊಳ್ಳಲಾಗಿದೆ.

ಒಟ್ಟಿನಲ್ಲಿ, ಮಕ್ಕಳ ಬಗ್ಗೆ ಅವರು ಧರ್ಮಕ್ಕೆ ಸೇವೆ ಸಲ್ಲಿಸುವವರಾಗಬೇಕೆಂಬ ಅಭಿಲಾಷೆ ಮಾತ್ರ ಇರಬೇಕು. ವಾಕಿಫೀನೆ ನೌ ಮಕ್ಕಳ ತಂದೆ ತಾಯಂದಿರು ಇದರ ಬಗ್ಗೆ ವಿಶಿಷ್ಟವಾಗಿ ಶ್ರದ್ಧೆ ನೀಡಬೇಕು. ತಮ್ಮ ಮಕ್ಕಳು ಧರ್ಮಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಗಮನ ಹರಿಸುವಂತೆ ಮಾಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಜನರು ಮಾಡುವುದೆಲ್ಲಾ ಕೇವಲ ಲೌಕಿಕ ಉದ್ದೇಶದಿಂದ ಎಂದು ನಾನು ನೋಡುತ್ತಿದ್ದೇನೆ. ಲೌಕಿಕ ಅಭಿಲಾಷೆಗಳು ಅವರಿಂದ ಆ ಕೆಲಸಗಳನ್ನು ಮಾಡಿಸುತ್ತಿವೆ. ಅವರು ಅಲ್ಲಾಹನಿಗೋಸ್ಕರ ಕೆಲಸ ಮಾಡುವುದಿಲ್ಲ. ಯಾರಾದರೂ ಮಕ್ಕಳನ್ನು ಪಡೆಯಲು ಆಶಿಸುವುದಾದರೆ ಅವರು **ವಜ್‌ಅಲ್‌ನಾ ಲಿಲ್‌ಮುತ್ತಖೀನ ಇಮಾಮ** ಎಂಬ ಪವಿತ್ರ ಖುರ್‌ಆನ್ ವಚನದ ಪ್ರಕಾರ ಸಂಕಲ್ಪ ಮಾಡಬೇಕು. ಇಸ್ಲಾಮ್ ಧರ್ಮ ಪ್ರಚಾರಕರಾದ ಮಕ್ಕಳು ಹುಟ್ಟಲು ಪ್ರಾರ್ಥಿಸಬೇಕು. ಇಂತಹ ಪರಿಶುದ್ಧ ಸಂಕಲ್ಪ ಹೊಂದಿದವರಿಗೆ ಝಕರಿಯಾ ಪ್ರವಾದಿಗೆ ಪುತ್ರನನ್ನು ನೀಡಿದ ಹಾಗೆ ಮಕ್ಕಳನ್ನು ನೀಡಲು ಅಲ್ಲಾಹನು ಶಕ್ತನಾಗಿದ್ದಾನೆ. ಆದರೆ ಜನರು ಇಚ್ಛಿಸುವುದೇನೆಂದರೆ ನಮ್ಮ ತೋಟ ಅಥವಾ ನಮ್ಮ ಸಂಪತ್ತು, ನಮ್ಮ ಮಕ್ಕಳಿಗೆ ಸಿಗಲಿ ಬೇರೆ ಸಂಬಂಧಿಕರು ಅವುಗಳನ್ನು ಪಡೆಯದಿರಲಿ ಎಂದಾಗಿದೆ. ಆದರೆ ಈ ಅವಿವೇಕಿಗಳಿಗೆ ತಿಳಿದಿಲ್ಲ, ಅವರು ಸತ್ತು ಹೋದಾಗ ಅವರ ಸ್ನೇಹಿತರು ಮತ್ತು ಶತ್ರುಗಳು, ಸಂಬಂಧಿಕರು ಅನ್ಯರು ಎಲ್ಲರೂ ಅವರಿಗೆ ಸಮವಾಗಿರುತ್ತಾರೆ.

ನಾನು ಮೊದಲು ಹೇಳಿದ ಹಾಗೆ, ವಾಕಿಫೀನೆ ನೌ ಮಕ್ಕಳ ತಂದೆ ತಾಯಂದಿರು ತಮ್ಮ ಮಕ್ಕಳ ತರಬೇತಿ ಬಗ್ಗೆ ವಿಶಿಷ್ಟವಾಗಿ ಶ್ರದ್ಧೆ ನೀಡಬೇಕು. ಅವರಿಗೋಸ್ಕರ ಪ್ರಾರ್ಥಿಸಬೇಕು. ಅವರು ದೊಡ್ಡವರಾಗಿ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವರಾಗಲಿ ಎಂದು ಪ್ರಾರ್ಥಿಸಬೇಕು. ಅವರು ಕೇವಲ ವಾಕಿಫೆ ನೌ ಎಂಬ ಲೇಬಲ್ ಮಾತ್ರ ಹೊಂದಿ, ದೊಡ್ಡವರಾದ ನಂತರ ನಾವು ನಮ್ಮ ಕೆಲಸ ಮಾಡುತ್ತೇವೆ ಎಂದು ಹೇಳುವವರಾಗಬಾರದು. ಅವರು ಜಮಾಅತನ್ನು ಕೇಳಬೇಕು– ಜಮಾಅತಿಗೆ ನಮ್ಮ ಆವಶ್ಯಕತೆ ಇದೆಯೇ ಎಂದು. ಜಮಾಅತ್ ಅನುಮತಿ ನೀಡುವುದಾದರೆ ತಮ್ಮ ಸ್ವಂತ ಕೆಲಸ ಮಾಡಬಹುದು. ಅವರಿಗೆ ಅನುಮತಿ ದೊರಕುವುದಿಲ್ಲವಾದರೆ ಅವರು ತಮ್ಮ ಪ್ರತಿಜ್ಞೆಗೆ ಬದ್ಧರಾಗಿ ತಮ್ಮ ತಂದೆ ತಾಯಂದಿರ ಪ್ರತಿಜ್ಞೆ ಈಡೇರಿಸುತ್ತಾ ತಮ್ಮನ್ನು ಜಮಾಅತಿಗೆ ಅರ್ಪಿಸಬೇಕು.

ಮಕ್ಕಳನ್ನು ಪಡೆಯಲು ಬಯಸುವವರು ಹಾಗೂ ಆ ಬಗ್ಗೆ ಪ್ರಾರ್ಥಿಸುವವರು ಹೀಗೆ ಯೋಚನೆ ಹೊಂದಿ ಪ್ರಾರ್ಥನೆ ಮಾಡಬೇಕು– ಧರ್ಮಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಮಕ್ಕಳು ಜನಿಸಲಿ. ತಂದೆ, ತಾಯಿ

ಮತ್ತು ಕುಟುಂಬದವರ ಗೌರವ ಕಾಪಾಡುವ ಮಕ್ಕಳು ಜನಿಸಲಿ. ತಮ್ಮ ತಂದೆ ತಾತಂದಿರ ಗೌರವವನ್ನು ಕಾಪಾಡುವ ಮಕ್ಕಳು ಜನಿಸಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬರ ಸಂತಾನಕ್ಕೆ ಸೇರಿದ ಅನೇಕ ಕುಟುಂಬಗಳಿವೆ. ಆದರೆ ಅವರ ಸಂತಾನಕ್ಕೆ ಸೇರಿದವರಾಗಿರುವುದು ಮಾತ್ರ ಸಾಕಾಗಲಾರದು. ಜನರು ಬಹಳ ಹೆಮ್ಮೆಯಿಂದ ತಮ್ಮ ಕುಟುಂಬದ ಬಗ್ಗೆ ಹೇಳುತ್ತಾರೆ. ಅದು ಒಳ್ಳೆಯದೆ. ಆದರೆ ಈ ಜನರು ತಮ್ಮ ಹಿರಿಯರ ಸತ್ಕರ್ಮಗಳನ್ನು ಜಾರಿಯಲ್ಲಿರಿಸಬೇಕಾದುದು ಆವಶ್ಯಕವಾಗಿದೆ. ತಮ್ಮ ಮಕ್ಕಳು ಅವರ ತಂದೆ ತಾಯಂದಿರು ಮಾಡಿದ ಒಳಿತುಗಳನ್ನು ಜಾರಿಯಲ್ಲಿರಿಸುವವರಾಗ ಬೇಕೆಂದು ಪ್ರಾರ್ಥಿಸಬೇಕು. ಅವರು ಹೀಗೆ ಪ್ರಾರ್ಥಿಸುವಾಗ ತಮ್ಮ ಸ್ವಂತ ಸ್ಥಿತಿಯ ಬಗ್ಗೆ ಸಹ ಗಮನಿಸುವರು. ನಾವು ನಮ್ಮ ತಂದೆ ತಾತಂದಿರ ಹೆಸರನ್ನು ಜೀವಂತವಾಗಿರಿಸಲು ನಮ್ಮ ಕರ್ಮಗಳ ಕಡೆಗೆ ದೃಷ್ಟಿ ಇರಿಸುವುದು ಆವಶ್ಯಕವಾಗಿದೆ ಎಂದು ಅವರು ಯೋಚಿಸುವರು. ಪ್ರತಿಯೊಬ್ಬನು ತನ್ನನ್ನು ಪರಿಶೋಧಿಸಬೇಕಲ್ಲದೆ ಮಕ್ಕಳು ಸಾತ್ವಿಕರಾಗಬೇಕೆಂಬ ಬಗ್ಗೆ ಕೊನೆಯುಸಿರು ತನಕ ಪ್ರಾರ್ಥಿಸುತ್ತಾ ಇರಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಯಾರು ಒಳಿತಿನ ಕಡೆಗೆ ಹೆಜ್ಜೆ ಹಾಕುತ್ತಾ ಮುಂದೆ ಸಾಗುತ್ತಾ ಇರುತ್ತಾರೋ ಅವರಿಗೆ ಅಲ್ಲಾಹನ ಸಹಾಯ ಯಾವಾಗಲೂ ದೊರಕುತ್ತಾ ಇರುತ್ತದೆ. ಅಂತಹ ಜನರು ಒಂದೇ ಸ್ಥಳದಲ್ಲಿ ನಿಂತಿರಲಾರರು. ಅಂತಹ ಜನರ ಅಂತಿಮ ಗತಿ ಉತ್ತಮವಾಗಿರುತ್ತದೆ. ಉತ್ತಮ ಅಂತಿಮ ಗತಿ ದೊರಕಲು ನಿಮಗೋಸ್ಕರ ಮತ್ತು ಪತ್ನಿ ಮಕ್ಕಳಿಗೋಸ್ಕರ ಯಾವಾಗಲೂ ಪ್ರಾರ್ಥಿಸುತ್ತಾ ಇರಬೇಕು. ನೀವು ಎಂತಹ ಕೆಲಸ ಮಾಡಬೇಕೆಂದರೆ ಅದು ನಿಮ್ಮ ಮಕ್ಕಳಿಗೆ ಉತ್ತಮ ಮಾದರಿಯಾಗಬೇಕು. ಇದು ತಂದೆ ತಾಯಿ ಮಾಡಬೇಕಾದ ಕೆಲಸವಾಗಿದೆ. ಆದುದರಿಂದ ಎಲ್ಲದಕ್ಕಿಂತಲೂ ಮೊದಲು ತಮ್ಮನ್ನು ಸುಧಾರಣೆ ಮಾಡಿಕೊಳ್ಳಬೇಕು. ನೀವು ಉನ್ನತ ಮಟ್ಟದ ಭಯಭಕ್ತಿ ಹೊಂದಿದವರಾದರೆ ಮತ್ತು ಅಲ್ಲಾಹನ ಸಂಪ್ರೀತಿಗೆ ನೀವು ಪಾತ್ರರಾದರೆ ನಿಮ್ಮ ಮಕ್ಕಳೊಂದಿಗೆ ಸಹ ಒಳ್ಳೆಯ ರೀತಿಯಲ್ಲಿ ಅಲ್ಲಾಹನು ವರ್ತಿಸುವನು ಎಂದು ದೃಢವಾಗಿ ನಂಬಬಹುದಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಖಿಝ್ರ್ ಮತ್ತು ಮೂಸಾ ಅಲೈಹಿಸ್ಸಲಾಮರ ಕಥೆಯನ್ನು ಪ್ರಸ್ತಾಪಿಸಲಾಗಿದೆ. ಅವರಿಬ್ಬರೂ ಸೇರಿ ಅನಾಥ ಮಕ್ಕಳಿಗೆ ಒಂದು ಗೋಡೆ ನಿರ್ಮಿಸಿದ್ದರು. ಆ ಮಕ್ಕಳ ಬಗ್ಗೆ ಅಲ್ಲಾಹನು ಹೇಳುತ್ತಾನೆ: **ಕಾನ ಅಬೂಹುಮಾ ಸಾಲಿಹನ್** ಆ ಇಬ್ಬರು ಮಕ್ಕಳ ತಂದೆ ಸಾಲಿಹ್ (ಸಾತ್ವಿಕ) ಆಗಿದ್ದನೆಂದು. ಆ ಮಕ್ಕಳು ಹೇಗಿದ್ದರೆಂದು ಹೇಳದೆ ತಂದೆ ತಾಯಂದಿರ ಬಗ್ಗೆ ಮಾತ್ರ ವಿವರಿಸಲಾಗಿದೆ. ಆದುದರಿಂದ ನೀವು ಈ ಉದ್ದೇಶಲಕ್ಷ್ಯವನ್ನು ಗಳಿಸಿರಿ. ನಿಮ್ಮ ಮಕ್ಕಳಿಗೋಸ್ಕರ ಯಾವಾಗಲೂ ಒಳಿತನ್ನು ಆಶಿಸಿರಿ. ಆಗ ಅಲ್ಲಾಹನು ಮಕ್ಕಳ ಅಭಿವೃದ್ಧಿಗೆ ಸಾಮಗ್ರಿ ಒದಗಿಸುವನು. ಅವರಿಗೆ ಆಹಾರವನ್ನು ಒದಗಿಸುವನು.

ತಂದೆ ತಾಯಂದಿರು ತಮ್ಮ ಮಾದರಿ ಮೂಲಕ ಮಕ್ಕಳ ತರಬೇತಿ ಮಾಡಬೇಕೆಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪದೇ ಪದೇ ಗಮನ ಹರಿಸಿದ್ದಾರೆ. ಅವರ ಉಪದೇಶಗಳು ಪವಿತ್ರ ಖುರ್‌ಆನಿನ ತತ್ವಗಳ ವಿವರಣೆಗಳೇ ಆಗಿವೆ. ಅಲ್ಲಾಹನು ನಮ್ಮ ಪೈಕಿ ಪ್ರತಿಯೊಬ್ಬರಿಗೆ ತಮ್ಮ ಮಕ್ಕಳಿಗೆ ಅತ್ಯುತ್ತಮ ಮಾದರಿಯಾಗುವ ಭಾಗ್ಯವನ್ನು ದಯಪಾಲಿಸಲಿ. ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವೆವು ಎಂಬ ಪ್ರತಿಜ್ಞೆಯನ್ನು ಅವರು ಈಡೇರಿಸುವವರಾಗುವಂತೆ ಮಾಡಲಿ. ಕೆಲವು ಜನರು ಅನ್ಯರ ಕಡೆಗೆ ನೋಡುತ್ತಾ ಇರುವ ಅಭ್ಯಾಸ ಹೊಂದಿರುತ್ತಾರೆ. ಅದಕ್ಕೆ ಬದಲಾಗಿ ಅವರು ತಮ್ಮ ಸ್ವಂತ ಸುಧಾರಣೆ ಕಡೆಗೆ ಗಮನ ಹರಿಸುವವರಾಗಲಿ. ಹೀಗೆ ಮಾಡಿದರೆ ನಾವು ಮುಂದೆ ಒಳ್ಳೆಯ ಪೀಳಿಗೆಯನ್ನು ಚಲಾಯಿಸಬಹುದು. ಅವರು ತಖ್ವವನ್ನು ಅನುಸರಿಸಿ ವರ್ತಿಸುವವರಾಗುವರು. ನಿಮ್ಮ ಮಕ್ಕಳಿಗೋಸ್ಕರ ಯಾವಾಗಲೂ ಪ್ರಾರ್ಥಿಸುವವರಾಗಿರಿ. ಆ ಮೂಲಕ ಅಲ್ಲಾಹನು ನಮ್ಮ ಮಕ್ಕಳನ್ನು ನಮ್ಮ ಕಣ್ಣಿಗೆ ತಂಪು ನೀಡುವವರನ್ನಾಗಿ ಮಾಡುತ್ತಾ ಇರಲಿ. ಈ ವ್ಯವಸ್ಥೆ ಮುಂದೆ ಸಹ ಚಲಿಸುತ್ತಾ ಮುಂದೆ ಸಾಗುವಂತಾಗಲಿ – ಆಮೀನ್.

——————*****——————

***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh, London on 14-07-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon